ಸಂಜೆ ಕೆರೆದಂಡೆಯಲ್ಲಿ ಸಿಕ್ಕ ಸದಾಶಿವನಿಗೆ ಹೇಳಿದ್ದು ನಾನೇ. ಅಷ್ಟೇ!

ಅದು ಊರಿಗೆ ಊರೇ ಗುಲ್ಲಾಗುತ್ತೆಂದು ನಾನೂ ಅಂದುಕೊಂಡಿರಲಿಲ್ಲ. ವಾರದ ನಂತರ ನಡೆದ ಸೆಂಡ್ ಆಫ್ ಪಾರ್ಟಿಯಲ್ಲಿ ಯಾರೋ ಅದನ್ನೊಂದು ಚಿಕ್ಕ ಬೋರ್ಡಿನಲ್ಲಿ ಬರೆಯಿಸಿ, ಕಾಲೇಜಿನ ಆಡಿಟೋರಿಯಂನ ಒಂದು ಮೂಲೆಯಲ್ಲಿ ಇರಿಸಿದ್ದರೆಂಬ ವಿಷಯವೂ ನನಗೆ ಗೊತ್ತಿರಲಿಲ್ಲ.

ಫೇರ್ವೆಲ್ ಪಾರ್ಟಿಗೆ ಎಲ್ಲರೂ ಸೇರಿದ್ದ ಹೊತ್ತು. ಪಾರು ಶೇಷತ್ತೆಯ ಕನಕಾಂಬರ ಬಣ್ಣದ ಸೀರೆಯುಟ್ಟು, ಅಪರೂಪಕ್ಕೆ ದುಂಡು ಮಲ್ಲಿಗೆ ಹೂ ಮುಡಿದು ಸ್ವಲ್ಪ ವಿಶೇಷವಾಗಿಯೇ ಡ್ರೆಸ್ ಮಾಡಿಕೊಂಡು ಬಂದಿದ್ದಳು. ಅದೆಷ್ಟು ಮುದ್ದಾಗಿ ಕಾಣುತ್ತಿದ್ದಳು! ಅವಳನ್ನು ನೋಡಿದ್ದೇ ಹೊಟ್ಟೆಯೊಳಗೆ ಏನೋ ಸಂಕಟ, ತಳಮಳ. ಯಾರೊಂದಿಗೂ ಹೆಚ್ಚು ಮಾತಿಲ್ಲದೇ ಡೆಸ್ಕಿನ ಒಂದು ಮೂಲೆಯಲ್ಲಿ ಅನ್ಯಮನಸ್ಕನಾಗಿ ಕುಳಿತಿದ್ದೆ.

ಹಾಡು, ಡ್ಯಾನ್ಸ್ ಎಂದು ಪಾರ್ಟಿಗೆ ಕಳೆಯೇರಿದ ಒಂದು ಹಂತದಲ್ಲಿ ಯೂನಿಯನ್ ಲೀಡರ್ ಗೋಪಾಲ, 'ಹಲೋ ಡಿಯರ್ ಫ್ರೆಂಡ್ಸ್, ಈಗ ಕಣ್ಣಿಗೆ ಬಟ್ಟೆ ಕಟ್ಟಿ ಕತ್ತೆಗೆ ಬಾಲ ಬರೆಯುವ ಆಟ. ಭಾಗವಹಿಸುವ ವಿದ್ಯಾರ್ಥಿಗಳು ದಯವಿಟ್ಟು ಮುಂದೆ ಬನ್ನಿ.' ಎಂದು ಅನೌನ್ಸ್ ಮಾಡಿದ್ದೇ ತಡ, ಎಲ್ಲರ ಕಣ್ಣುಗಳೂ ಏಕಕಾಲದಲ್ಲಿ ಸ್ಟೇಜ್ ಮೇಲೆ ಕೇಂದ್ರೀಕೃತವಾಗಿದ್ದಂತಹ ಸಮಯವದು. ಗೋಪಾಲ ಸ್ಟೇಜಿನ ಮೂಲೆಯಲ್ಲಿದ್ದ ಬೋರ್ಡನ್ನು ಮೆಲ್ಲಗೆ ನಡುವೆ ತಂದು, ಹಿಂದುಮುಂದಾಗಿದ್ದ ಅದನ್ನು ನಿಧಾನವಾಗಿ ತಿರುಗಿಸಿದನಷ್ಟೇ.

ಕಪ್ಪಗಿನ ಅಚ್ಚ ಹೊಸ ಬೋರ್ಡಿನ ಮೇಲೆ ಬಣ್ಣಬಣ್ಣದ ಸೀಮೆಸುಣ್ಣಗಳಿಂದ ಚಿತ್ರಿತಗೊಂಡು ತೊನೆದಾಡುತ್ತಿರುವ ಹೂವು ಬಳ್ಳಿಗಳು, ಮಧ್ಯೆ ಮಧ್ಯೆ ನೇತಾಡುತ್ತಿರುವ ನೇರಳೆ ಬಣ್ಣದ ದ್ರಾಕ್ಷಿ ಗೊಂಚಲುಗಳು, ನಡುವಿನಲ್ಲಿ ಅತ್ಯಂತ ಸುಂದರವಾದ ದುಂಡಗಿನ ದೊಡ್ಡಕ್ಷರಗಳಲ್ಲಿ 'ಪಾರ್ವತಿ ಭಟ್‌ಗೆ ಗರ್ಭಕೋಶವಿಲ್ಲವಂತೆ!!' ಎಂಬ ಒಕ್ಕಣೆಕೆ, ಕೆಳಗೆ 'ಕೇಶವ' ಎಂಬ ಸಹಿ!

ಒಂದುಕ್ಷಣ ಏನಾಗುತ್ತಿದೆಯೆಂದೇ ನನಗೆ ಅರ್ಥವಾಗಲಿಲ್ಲ. ಇದ್ದಕಿದ್ದಂತೆ ಗುಸುಗುಸು, ಪಿಸುಪಿಸು ಮಾತುಗಳು, ಜೋರು ಜೋರು ಕೂಗುಗಳು, ಕಿರುಚಾಟಗಳು, ಸೀನಿಯರ್ಸ್ ಜೂನಿಯರ್ಸ್ ಎಲ್ಲಾ ಒಟ್ಟಾಗಿ ನೋಡನೋಡುತ್ತಲೇ ನಿರ್ಮಾಣಗೊಂಡ ಹುಡುಗಿಯರ ಒಂದು ಗುಂಪು, ಹುಡುಗರದ್ದು ಮತ್ತೊಂದು ಗುಂಪಾಗಿ ದೊಡ್ಡ ಗಲಾಟೆಯೇ ನಡೆದುಹೋಯಿತು. ಈ ಮಧ್ಯೆ ಪಾರು ಡೆಸ್ಕಿನ ಮೇಲೆ ಕುಸಿದು ಮುಖ ಮುಚ್ಚಿಕೊಂಡು ಜೋರಾಗಿ ಅಳಲು ಶುರು ಮಾಡಿದ್ದಳು. ಅವಳನ್ನು ಸಮಾಧಾನಿಸುತ್ತಾ ಅವಳ ಸುತ್ತಾ ಮುತ್ತುಹಾಕಿಕೊಂಡಿದ್ದ ಒಂದಷ್ಟು ಹುಡುಗಿಯರು!

ನಾನು ದಿಗ್ಭ್ರಾಂತನಾಗಿ ಕೂತಲ್ಲೇ ಮಂಕು ಬಡಿದವನಂತೆ ಕೂತುಬಿಟ್ಟಿದ್ದೆ ಒಂಟಿಯಾಗಿ. ಏನೊಂದೂ ಅರ್ಥವಾಗಿರಲಿಲ್ಲ. ಅರ್ಥವಾಗುವುದಕ್ಕೆ ಮುಂಚೆಯೇ ನಡೆದುಹೋದ ಅನಾಹುತ!

ಗಲಾಟೆ ಪ್ರಿನ್ಸಿಪಾಲರ ಕೊಠಡಿಯವರೆಗೂ ಹೋಯಿತು. ಕಾಲೇಜಿನ ಎಲ್ಲಾ ಶಿಕ್ಷಕರೂ ಹಾಜರಿದ್ದರು. ವಿಷಯವೇನೆಂದು ಅವರಿಗೆ ಅರ್ಥವಾಗಬೇಕಾದರೆ ಸುಮಾರು ಹೊತ್ತು ತೆಗೆದುಕೊಂಡಿತು. ಎಲ್ಲರನ್ನೂ ಸಮಾಧಾನ ಪಡಿಸಿ ಕೂರಿಸಿದ ಪ್ರಿನ್ಸಿಪಾಲರು ನಿಧಾನವಾಗಿ ಮಾತನಾಡಲು ಶುರು ಮಾಡಿದರು.

ಪಾರ್ಟಿಗೆ ಸೇರಿದ್ದ ವಿದ್ಯಾರ್ಥಿಗಳಿಗೆ ಎಂದಿನಂತೆ ಒಂದಷ್ಟು ಹಿತವಚನ ನುಡಿಗಳು, ಈ ಹೊತ್ತಿನಲ್ಲಿ ನಮಗಿರಬೇಕಾದ ಭವಿಷ್ಯದ ಕಲ್ಪನೆ, ಹೆತ್ತವರ ಕಷ್ಟ, ವಿದ್ಯಾಸಂಸ್ಥೆಗಳ ಧ್ಯೇಯವೆಂದು ಸಣ್ಣ ಭಾಷಣ ಮಾಡಿ, ಕಡೆಯಲ್ಲಿ ಎಲ್ಲವನ್ನೂ ತಿಳಿಗೊಳಿಸುವ ಸದುದ್ದೇಶದಿಂದಲೋ ಎಂಬಂತೆ, 'ಎಲ್ಲಮ್ಮಾ, ಪಾರ್ವತಿ ಭಟ್ ಎದ್ದು ನಿಂತ್ಕೋ ತಾಯಿ. ನಿಂಗೆ ಗರ್ಭಕೋಶವಿದೆಯೋ ಇಲ್ಲವೋ ಎಲ್ಲರಿಗೂ ಸ್ವಲ್ಪ ಹೇಳಿಬಿಡಮ್ಮಾ!' ಎಂದಿದ್ದೇ ತಡ, ಆಗಷ್ಟೇ ಸ್ವಲ್ಪ ಶಾಂತವಾಗಿದ್ದ ಪ್ರಕ್ಷುಬ್ಧ ಪರಿಸ್ಥಿತಿಗೆ ತಿಳಿಗೇಡಿಯೊಬ್ಬ